ಶ್ರೀ ಕೆ.ಎಂ.ಶಿವಲಿಂಗೇಗೌಡ:– ನೋಂದಾವಣೆ ವ್ಯವಸ್ಥೆ ಇರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಷ್ಟೋ ಖಾಸಗಿ ಸಂಸ್ಥೆಗಳು ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಈ ಸಂಸ್ಥೆಗಳನ್ನು ಸರ್ಕಾರ ನೋಂದಾವಣೆ ಮಾಡಿಕೊಳ್ಳದೆ ಇದ್ದರೆ ಅವರು ಯಾವ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಬಿತ್ತನೆ ಬೀಜವನ್ನು ಮಾರಾಟ ಮಾಡುತ್ತಿದ್ದಾರೆ? ಇಲ್ಲಿ ಬೀಜ ಮಾರಾಟ ಮಾಡುವುದಕ್ಕೆ ಸರ್ಕಾರದಿಂದ ಏನಾದರೂ ಅಂದರೆ, ಬೀಜ ಮಾರಾಟ ಮಾಡಲು ಮಾನ್ಯತೆ ಅಥವಾ ರಿಜಿಸ್ಟ್ರೇಷನ್ ಮಾಡಿಕೊಂಡಿರಬೇಕಲ್ಲವೇ? ಸರ್ಕಾರ ಅವರನ್ನು ಯಾವುದಾದರೊಂದು ಹಿಡಿತದಲ್ಲಿ ಇಟ್ಟುಕೊಂಡಿರಬೇಕಲ್ಲವೇ? ಕರ್ನಾಟಕ ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳು ಸುಮಾರು 90%ನಷ್ಟು ಹೈಬ್ರೀಡ್ ಬೀಜವನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಆದರೆ, ಈ ಸಂಸ್ಥೆಗಳನ್ನು ನಾವು ನೋಂದಾವಣೆ ಮಾಡಿಕೊಳ್ಳುವ ವ್ಯವಸ್ಥೆಯೇ ಇಲ್ಲವೆಂದರೆ ಹೇಗೆ?

ಶ್ರೀ ಎಸ್.ಎ.ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ಅವರನ್ನು ನೋಂದಾವಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಮೊದಲು ಬೀಡರ್ ಸೀಡ್ಸ್ ಬಳಕೆ ಮಾಡಿ ಫೌಂಡೇಷನ್ ಸೀಡ್ಸ್ ಬೆಳೆಯುತ್ತಾರೆ. ಆನಂತರ ಫೌಂಡೇಷನ್ ಸೀಡ್ಸ್‌ನ್ನು ಬಳಕೆ ಮಾಡಿಕೊಂಡು ಸರ್ಟಿಫೀಕೇಟ್ ಸೀಡ್ಸ್‌ನ್ನು ಉತ್ಪಾದನೆ ಮಾಡುತ್ತಾರೆ. ಇದು ಆದಮೇಲೆ ಮತ್ತೆ ಏನಾದರೂ ಬೀಜದ ಕೊರತೆ ಯಾದಾಗ ಟ್ರೂತ್‌ಫುಲ್ ಲೇಬಲ್‌ನ ಬೀಜವನ್ನು ಮಾರಾಟ ಮಾಡುತ್ತಾರೆ. ಈ ರೀತಿಯಾದ ವ್ಯವಸ್ಥೆ ಇಡೀ ರಾಜ್ಯದಲ್ಲಿದೆ.

ದಾಳಿಂಬೆ ಬೆಳೆಗೆ ದುಂಡಾಣು ರೋಗ ಹರಡಿರುವ ಬಗ್ಗೆ

19(40) ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)
ಶ್ರೀ ವಿ. ಉಮೇಶ್‌ಕತ್ತಿ (ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳು ಎಷ್ಟು ಹಾಗೂ ಯವುವು (ವಿವರಗಳನ್ನು ನೀಡುವುದು);

ಹನ್ನೊಂದು

ಅವುಗಳ ವಿವರಗಳು ಕೆಳಗಿನಂತಿವೆ.

ಕ್ರ. ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆಕ್ಟೇರ್)
1	ಕೊಪ್ಪಳ	3580
2	ಬಳ್ಳಾರಿ	1340

3	ಬಾಗಲಕೋಟೆ	2196
4	ಬಿಜಾಪುರ	1336
5	ತುಮಕೂರು	1613
6	ಚಿತ್ರದುರ್ಗ	1644
7	ಬೆಳಗಾಂ	377
8	ಗದಗ	213
9	ಬೀದರ್	58
10	ದಾವಣಗೆರೆ	119
11	ರಾಯಚೂರು	1259
	ಒಟ್ಟು	13735

ಅ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗ ಹರಡಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು;

ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ;

1. ರಾಷ್ಟ್ರೀಯ ತೋಟಗಾರಿಕೆ ಮಿಷನ್ (National Horticulture Mission) ಯೋಜನೆ ಅಡಿಯಲ್ಲಿ ದಾಳಿಂಬೆ ದುಂಡಾಣು ರೋಗ ನಿಯಂತ್ರಣಕ್ಕಾಗಿ ಉತ್ತಮ ನಿರ್ವಹಣಾ ಪದ್ಧತಿಗಳನ್ನು (Good Management Practices) ಅನುಸರಿಸಲು ರೈತರಿಗೆ ಪ್ರತಿ ಹೆಕ್ಟೇರಿಗೆ ರೂ. 25,000/- ದಂತೆ 2007-08 ಮತ್ತು 2008-09ನೇ ಸಾಲಿನಲ್ಲಿ ಸಹಾಯಧನವನ್ನು 4 ಹೆಕ್ಟೇರ್‌ವರೆಗೆ ನೀಡಲಾಗಿದೆ.
2. ದುಂಡಾಣು ರೋಗದ ನಿಯಂತ್ರಣೆಗೆ ಸಮೀಕ್ಷೆ (Survey), ಕಣ್ಗಾವಲು (Surveilance), ತರಬೇತಿ (Training), ಪ್ರಾತ್ಯಕ್ಷಿಕೆ (Demonstration) ಮತ್ತು ರೋಗ ಮುನ್ಸೂಚನೆ ವ್ಯವಸ್ಥೆ (Disease Forecasting) ಕಲ್ಪಿಸಲು ಜಾಲವನ್ನು ರೂಪಿಸಲಾಗಿರುತ್ತದೆ.
3. ರಾಜ್ಯ ಸರ್ಕಾರದ ವತಿಯಿಂದ ದುಂಡಾಣು ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡು ನಿಯಂತ್ರಣಕ್ಕೆ ಪರಿಣಾಮಕಾರಿ ನಿವಾರಣೋಪಾಯಗಳನ್ನು ಕಂಡಿ ಹಿಡಿಯಲು ರೂ. 100 ಲಕ್ಷಗಳನ್ನು

ಕೃಷಿ ವಿಶ್ವವಿದ್ಯಾನಿಲಯ, ಧಾರವಾಡರವರಿಗೆ ಮಂಜೂರು ಮಾಡಲಾಗಿದೆ (2007–08 ರಿಂದ 2009–10 ರವರೆಗೆ).

ಈ) ಕೇಂದ್ರ ಸರ್ಕಾರ ಈ ರೋಗವನ್ನು ತಡೆಗಟ್ಟಲು ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದೆಯೇ;

ಹೌದು, 2007–08 ಮತ್ತು 2008–09ರ ಸಾಲಿನ 2 ವರ್ಷಗಳ ಅವಧಿಗೆ ವಿಶೇಷ ಪ್ಯಾಕೇಜ್ ಜಾರಿಯಲ್ಲಿತ್ತು.

ಉ) ಹಾಗಿದ್ದಲ್ಲಿ, ಈ ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿದೆಯೇ, ಈ ರೋಗವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ವಿವರಗಳು ಮೇಲೆ 'ಇ' ನಲ್ಲಿರುವಂತೆ

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಮಾನ್ಯ ಅಧ್ಯಕ್ಷರೆ, ದಾಳಿಂಬೆ ಬೆಳೆಗೆ ಬರುವ ದುಂಡಾಣು ರೋಗವನ್ನು ನಾಶಪಡಿಸಬೇಕೆಂದು ಕೇಂದ್ರ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಒಂದು ಪ್ಯಾಕೇಜ್‌ನ್ನು ಘೋಷಣೆ ಮಾಡಿದರು. ಆ ಪ್ಯಾಕೇಜ್‌ನ ಹಣವನ್ನು ಕೇಂದ್ರ ಸರ್ಕಾರದವರು ವಿತರಣೆ ಮಾಡಿದ್ದಾರೆ. ರಾಜ್ಯ ಸರ್ಕಾರದ ಪಾಲು ಕೂಡ ಅದರಲ್ಲಿ ಇದೆ. ಆ ಕಾರಣಕ್ಕಾಗಿ ರಾಜ್ಯ ಸರ್ಕಾರದ ಪಾಲಿನ ಹಣ ಅಂದರೆ, ರೈತರಿಗೆ ಕೊಡತಕ್ಕಂಥ ಸಹಾಯಧನವನ್ನು ಇದುವರೆಗೆ ಏಕೆ ವಿತರಣೆ ಮಾಡಲಿಲ್ಲವೆಂಬುದು ನನ್ನ ಪ್ರಶ್ನೆಯಾಗಿದೆ. ಮತ್ತೆ ಆ ರೋಗವನ್ನು ಹತೋಟಿಯಲ್ಲಿಡುವುದಕ್ಕೆ ಏನು ಕಾರ್ಯಕ್ರಮಗಳನ್ನು ಈ ಸರ್ಕಾರದವರು ಹಾಕಿಕೊಂಡಿದ್ದಾರೆಂದು ಮತ್ತು ಆ ಬೆಳೆಯನ್ನು ಉಳಿಸತಕ್ಕಂಥ ವಿಚಾರ ಸರ್ಕಾರದ ಮುಂದೆ ಇದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದ ಕಡೆಯಿಂದ ಬಯಸುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ:– ಮಾನ್ಯ ಸಭಾಧ್ಯಕ್ಷರೆ, ಈ ದಾಳಿಂಬೆ ಬೆಳೆಗೆ ದುಂಡಾಣು ರೋಗ ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿಶೇಷವಾಗಿ ಹರಡಿದೆ. 2007–08 ಮತ್ತು 2008–09ನೇ ಸಾಲಿನಲ್ಲಿ ಈ ರೋಗ ಸಾಕಷ್ಟು ಹರಡಿ ದಾಳಿಂಬೆ ಬೆಳೆಗೆ ತೊಂದರೆಯಾಗಿದ್ದು ನಿಜ. ಕೇಂದ್ರ ಸರ್ಕಾರ 25%ನಷ್ಟು ಹಣಕಾಸಿನ ಸಹಾಯವನ್ನು ಒದಗಿಸಿ ಆ ರೋಗವನ್ನು ತಡೆಯುವುದಕ್ಕೆ ಪ್ರಯತ್ನ ಮಾಡಿರತಕ್ಕಂಥ

11-30 PM

ಮಾಹಿತಿ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದೇ ರೀತಿ ರೈತನು ತನ್ನದೇ ಆದಂಥ 25% ಹಣ ಅವನು ಹಾಕಬೇಕು ಎನ್ನುವಂಥ ಕಾರ್ಯಕ್ರಮ ಇದೆ. ಅದರ ಜೊತೆಗೆ ರಾಜ್ಯ ಸರ್ಕಾರ ತನ್ನದೇ ಆದ ಪಾಲನ್ನು 2.500 ರೂ.ಗಳನ್ನು ಕೊಡಬೇಕಾದಂಥ ಕಾರ್ಯಕ್ರಮ ಈ ಯೋಜನೆಯಲ್ಲಿ ಜಾರಿಯಲ್ಲಿದೆ. ಆದರೆ ಆ ರೋಗ ಬಂದಂಥ ಸಂದರ್ಭದಲ್ಲಿ ಕೆಲವು ರೈತರು ರೋಗ ಬಂದ ತಕ್ಷಣ ಈ ದಾಳಿಂಬೆ ಬೆಳೆಯನ್ನು ಕಿತ್ತು ಹಾಕಿದರು. ಆ ರೋಗ ಬಂದಂಥ ಸಂದರ್ಭದಲ್ಲಿ ಈ ದುಂಡಾಣು ರೋಗಕ್ಕೆ ಔಷದಿ ಸಿಂಪಡಿಸಲಿಕ್ಕೆ ಸಹಾಯಧನ ಕೊಡಬೇಕಾಗಿತ್ತು. ಆವತ್ತಿನ ದಿವಸ ಸರ್ಕಾರ

ಪೂರ್ತಿಯಾಗಿ ಅದರ ಬಗ್ಗೆ ವಿಚಾರ ಮಾಡಿದಾಗ ಬಹಳಷ್ಟು ಜನರು ಕಿತ್ತು ಹಾಕಿದ್ದಾರೆ. ಕಿತ್ತು ಹಾಕಿರುವುದರಿಂದ ಕೊಡುವುದಕ್ಕೆ ಬರುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದರು. ಆ ಬೆಳೆಯನ್ನು ಬೆಳೆಯಲಿಕ್ಕೆ ನಾವು ಸಹಾಯಧನವನ್ನು ಕೊಟ್ಟಿದ್ದೆವು. ದುಂಡಾಣು ರೋಗ control ಮಾಡುವುದಕ್ಕೆ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಹಾಯಧನವನ್ನು ಕೊಡಬೇಕಾಗಿತ್ತು. ಆದರೆ ಆವತ್ತಿನ ದಿವಸ ಅದನ್ನು ಕೊಡುವುದಕ್ಕೆ ಆಗಿರಲಿಲ್ಲ. ಆದರೆ ಕಳೆದ ಸದನದಲ್ಲಿ ಈ ಬಗ್ಗೆ ಪ್ರಶ್ನೆ ಬಂದಾಗ ಆ ಸಹಾಯಧನವನ್ನು ಕೊಡುತ್ತೇವೆಂದು ನಾನು ಒಪ್ಪಿದ್ದೇವೆ. ಈಗಾಗಲೇ ಹಣಕಾಸು ಇಲಾಖೆಯವರು ಸಹ ಹಣವನ್ನು ಬಿಡುಗಡೆ ಮಾಡುವಂಥ ಹಂತದಲ್ಲಿದ್ದಾರೆ. ಕೂಡಲೆ ಅದರ ಹಣವನ್ನು ಬಿಡುಗಡೆ ಮಾಡಿ ಕೊಡಿಸುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆಂದು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಹಣವನ್ನು ಬಿಡುಗಡೆ ಮಾಡುವ ಹಂತದಲ್ಲಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿ ಇವರೇ ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ. ಸರ್ಕಾರ ಬೆಳೆ ಹಾನಿ ಏನು ಇದೆ, ಆ ಪ್ಯಾಕೇಜ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದುವರೆಗೂ ಕೂಡ ಅದು ಕಾರ್ಯಗತವಾಗುತ್ತಿಲ್ಲ. ಆ ಬೆಳೆ ಬೆಳೆಯುವುದಕ್ಕೆ ರೈತ ಬ್ಯಾಂಕಿನಲ್ಲಿ ಲಕ್ಷಾಂತರ ಹಣವನ್ನು ತೆಗೆದುಕೊಂಡಿದ್ದಾನೆ. ಅವನು ಬೆಳೆ ಬೆಳೆಯತಕ್ಕಂಥ ಸಂದರ್ಭದಲ್ಲಿ ಫೆನ್ನಿಂಗ್ ಮಾಡಬೇಕಾಗುತ್ತದೆ, ಪಿಟ್ಸ್ ಹಾಕಬೆಕಾಗುತ್ತದೆ. 8–10 ರೂ.ಗಳನ್ನು ಕೊಟ್ಟು ಪ್ಲಾಂಟ್ಸ್ ತೆಗೆದುಕೊಂಡು ಬಂದಿರುತ್ತಾನೆ. ಮೆಡಿಸಿನ್ ಸೇರಿ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿದಂಥ ರೈತನ ನೆರವಿಗೆ ಇವರು ಬರುವುದಿಲ್ಲವೆಂದರೆ ಏನರ್ಥ? ಇನ್ನು ಇವರು ಆ ಹಂತದಲ್ಲಿಯೇ ಇದ್ದೇವೆ ಎನ್ನವಂಥ ಮಾತನ್ನು ಹೇಳುತ್ತಿದ್ದಾರೆ. ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ರೈತರ ಹೆಸರಿನಲ್ಲಿ ಪ್ರಮಾಣವನ್ನು ಸ್ವೀಕಾರ ಮಾಡಿದ್ದಾರೆ. ರೈತರು ಬಹಳವೆಂದರೆ, 11 ಜಿಲ್ಲೆಯಲ್ಲಿ ಈ ಬೆಳೆಯನ್ನು ಬೆಳೆದಿದ್ದಾರೆ. 735 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಈ ಬೆಳೆ ಇದೆ. ಇಷ್ಟೊಂದು ಕಡಿಮೆ ಪ್ರಮಾಣದಲ್ಲಿರುವ ಬೆಳೆಗೆ ಇವರಿಂದ ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲವೆಂದರೆ, ರೈತರು ಹೇಗೆ ಮುಂದಿನ ಬೆಳೆಯನ್ನು ಬೆಳೆಯುತ್ತಾರೆ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ಮಾನ್ಯ ಅಧ್ಯಕ್ಷರೆ, ಹೋದ ಅಧಿವೇಶನದಲ್ಲಿ ಕೂಡ ಸರ್ಕಾರ ಸಿದ್ಧಪಡಿಸಿದ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿಯೇ 25% ಬೆಳೆ ಬೆಲೆಯತಕ್ಕಂಥದ್ದು ಕೊಪ್ಪಳ ಜಿಲ್ಲೆಯಲ್ಲಿ, ತಾವು ಅಂಕಿ ಅಂಶಗಳನ್ನು ನೋಡಿದಾಗ, ಇವತ್ತು ಇದಕ್ಕೆ ಕೇಂದ್ರ ಸರ್ಕಾರ ಕೊಡಬೇಕಾಗಿದ್ದಂಥ ಸಹಾಯಧನವನ್ನು ಅದು ಹಂತ ಹಂತವಾಗಿ ಕೊಡತಕ್ಕಂಥದ್ದು ಇದೆ. ಈಗ ಬೇರೆ ರಾಜ್ಯಗಳಲ್ಲಿ ಮೂರನೇ ಕಂತನ್ನು ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಪಡೆದಿದ್ದಾರೆ. ಇವತ್ತು ನಮ್ಮ ರಾಜ್ಯದವರು ಮೊದಲನೆಯ ಕಂತನ್ನು

ಯುಟಿಲೈಸ್ ಮಾಡದೇ ಆ ಹಣವನ್ನು ಕೊಡಲಾರದೆ, ರೈತನಿಗೆ ಮೋಸ ಮಾಡತಕ್ಕಂಥ ಕೆಲಸವನ್ನು ಮಾಡಿ, ಅದರ ಜೊತೆಗೆ ತಾವು 25% ಹಣವನ್ನು ಕೊಡಬೇಕಾಗುತ್ತದೆಂದು ಆ ಹಣವನ್ನು ಎಲ್ಲಿಂದ ತರಬೇಕು ಎಂದು ಆ ದೃಷ್ಟಿಯಿಂದ ಹಣವನ್ನು ಇವತ್ತು ಕೊಟ್ಟಿಲ್ಲ. ಈಗ ಮೂರನೆಯ ಕಂತನ್ನು ಪಡೆದಿರತಕ್ಕಂಥ ಮಹಾರಾಷ್ಟ್ರ ಮಾದರಿಯಲ್ಲಿ ನಾವು ಮೂರನೆಯ ಕಂತನ್ನು ಪಡೆಯಬೇಕಾಗಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ರೈತ ಚಿಂತಾಜನಕ ಸ್ಥಿತಿಯಲ್ಲಿದ್ದಾನೆ. ಮಳೆ ಬಂದಿಲ್ಲ, ಮಳೆ ಬಂದಿಲ್ಲ, ಬೆಳೆ ಇಲ್ಲ, ನಾವು ಡ್ರಿಪ್ ಇರಿಗೇಶನ್ ಮಾಡಿ ಬೆಳೆದಂಥ ಬೆಳೆ ಕೂಡ ಇವತ್ತು ಬಂದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಇಲಾಖೆಯ ಅಧಿಕಾರಿಗಳು ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದದಾರೆ. ಯಾವ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಈ ಕೆಲಸವನ್ನು ಮಾಡಿದ್ದಾರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ, ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಹೋದ ಸದನದಲ್ಲಿ ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿರುತ್ತೀರಿ, ಈಗಲೂ ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಇದು ಕಾರ್ಯಗತವಾಗುವುದು ಯಾವಾಗ? ಹನ್ನೆರಡುವರೆ ಸಾವಿರ ರೂ.ಗಳನ್ನು National Horticulture Mission ನಿಂದ ಕೊಡಬೇಕಾಗಿದ್ದನ್ನು ಕೊಟ್ಟು ಬಿಟ್ಟಿದ್ದೀರಿ. ಉಳಿದ ಹನ್ನೆರಡುವರೆ ಸಾವಿರ ರೂ.ಗಳನ್ನು ರಾಜ್ಯ ಸರ್ಕಾರ ಕೊಡಬೇಕೆಂದು ಕೇಂದ್ರ ಸರ್ಕಾರ ಮಾಡಿರುವ ಆದೇಶದಂತೆ ನೀವು ಕೊಡಲಿಲ್ಲ. ಅಧಿಕಾರಿಗಳು ಮಾಡುತ್ತಿದ್ದಾರೆ, ಕೊಡುತ್ತೇವೆ ಎನ್ನುವ ಮಾತನ್ನು ಇನ್ನು ಹೇಳುತ್ತಿದ್ದೀರಿ ಇದು ಸರಿಯಲ್ಲ. ನೀವು ಇಂತಹ ದಿವಸ ಕೊಡುತ್ತೇವೆಂದು ಹೇಳಿ, ಇಲ್ಲವೆ ಕೊಡುವುದಿಲ್ಲವೆಂದು ಹೇಳಿ. ಆದರೆ ನೀವು ರೈತರು ಬಿತ್ತನೆ ಮಾಡಿದ್ದನ್ನು ಕಿತ್ತು ಹಾಕಿದರು ಎಂದು ಹೇಳಿದಿರಿ. ಇಡೀ ರಾಜ್ಯದಲ್ಲಿ 13000 ಹೆಕ್ಟೇರ್ ಇರಬೇಕಾದರೆ, ನಿಮ್ಮ ಅಧಿಕಾರಿಗಳು ಹತ್ತಿ ಎಷ್ಟು ಗಿಡ ಇತ್ತು, ಎಷ್ಟು ಎಕರೆ ಪ್ರದೇಶದಲ್ಲಿತ್ತು ಎನ್ನುವ ಪ್ರತಿ ಅಂಕಿ ಅಂಶಗಳು ಇದೆ. ಯಾರೋ ಒಬ್ಬರು ಕಿತ್ತು ಹಾಕಿದರು ಎನ್ನುವ ಒಂದು ಕಾರಣವನ್ನು ಮಾಡಿಬಿಟ್ಟು ನಾವು ಯಾರಿಗೂ ಕೊಡುವುದಿಲ್ಲವೆಂದು ಹೇಳಿಬಿಟ್ಟರೆ ಹೇಗೆ? ಇವತ್ತು ಕೂಡ ಆ ರೈತರು ದುಡ್ಡು ಬರುತ್ತದೆಂದು ಹೇಳಿ ಹಾಗೆ ಬಿಟ್ಟುಕೊಂಡು ಕುಳಿತಿದ್ದಾರೆ. ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೆಕು. ಇಲ್ಲದಿದ್ದರೆ ಆ ಪ್ರದೇಶದ ಶಾಸಕರನ್ನು ಕರೆದು ಚರ್ಚೆ ಮಾಡಿ ಏನಾದರೊಂದು ಕಾರ್ಯಕ್ರಮವನ್ನು ಮಾಡಿ. ನೀವು ಎಫೆಕ್ಟಿವ್ ಮಿನಿಸ್ಟರ್ ಎಂದು ನಾವು ತಿಳಿದುಕೊಂಡಿದ್ದೆವು. ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 2006–07, 2007–08ರಲ್ಲಿ ದಾಳಿಂಬೆ ಬೆಳೆಗೆ ದುಂಡಾಣು ರೋಗ ಬಂದಿದ್ದು ನಿಜ. ಆಗಿನ ಸರ್ಕಾರಗಳು ಈ ರೋಗಕ್ಕೆ ಕೇಂದ್ರ ಸರ್ಕಾರ ಸಹಾಯಧನ ಒದಗಿಸಿದ್ದು ನಿಜ. ರಾಜ್ಯ

ಸರ್ಕಾರ ಕೊಡಬೇಕಾಗಿದ್ದ ಆವತ್ತಿನ ತನ್ನ ಪಾಲಿನ ಹಣವನ್ನು ಕೊಡಲಿಲ್ಲ. ಕಾರಣ ಇಷ್ಟೆ, ಆವತ್ತಿನ ದಿವಸ ಕೆಲವು ರೈತರು ಈ ಬೆಳೆಯನ್ನು ಕಿತ್ತು ಹಾಕಿದ್ದಾರೆಂದು ರಿಪೋರ್ಟ್ ಬಂದಿತ್ತು. ಆದು ಆದ ಮೇಲೆ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಬಂದ ಮೇಲೆ, ರೈತರ ಹೆಸರಿನ ಮೇಲೆ ಪ್ರಮಾಣ ವಚನ ಮಾಡಿದ ಮೇಲೆ, ನಾವು ಅಧಿಕಾರಿಕ್ಕೆ ಬಂದ ಮೇಲೆ ಈ ಬೆಳೆಗೆ ವಿಶೇಷವಾದಂಥ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ನಾನು ಉತ್ತರವನ್ನು ಹೇಳುವುದಕ್ಕೆ ಬಿಡಿ. ನೀವು ಹೇಳುವುದನ್ನು ನಾವು ಕೇಳಿದ್ದೇವೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಕಂಪ್ಲೀಟ್ ಮಾಡಲಿ. ಮಾನ್ಯ ಕರಡಿ ಸಂಗಣ್ಣನವರೆ, ತಾವು ಆಮೇಲೆ ಕೇಳಿ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷದಿಂದ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ, ಯಾವ ರೈತರು ಕಿತ್ತು ಹಾಕಿದ್ದರೂ ಇರಲಿ, ರಾಜ್ಯ ಸರ್ಕಾರ ಕೊಡಬೇಕಾಗಿರುವ ತನ್ನ ಪಾಲನ್ನು ಕೊಡಲೇಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡು ಅದರ ಬಗ್ಗೆ ಈಗಾಗಲೇ ಹಣಕಾಸು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇವೆ. ಮುಂದೆ ಬರುವ ಒಂದು ಅಥವಾ ಒಂದೂವರೆ ತಿಂಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡುತ್ತೇವೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಬೇಡ. ಅದರ ಜೊತೆ ಈಗಾಗಲೇ ಯೂನಿವರ್ಸಿಟಿಗಳು ಆ ರೋಗವನ್ನು ತಡೆ ಹಿಡಿಯಲಿಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿ, ಇವತ್ತು ಒಂದು ತೀರ್ಮಾನಕ್ಕೆ ಬಂದು ಆ ರೋಗವನ್ನು ತಡೆ ಹಿಡಿಯಲಿಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಪಾಂಪ್ಲೆಟ್ ಮೂಲಕ ರೈತರಿಗೆ ಮುಟ್ಟಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಂಡಂಥ ಸರ್ಕಾರ ರೈತರ ಬಗ್ಗೆ ಕಳಕಳಿ ಇರುವಂಥ ಸರ್ಕಾರ ಇದನ್ನು ಕೊಟ್ಟೇಕೊಡುತ್ತೇವೆ. ಯಾವುದೇ ಭಿನ್ನಾಭಿಪ್ರಾಯ ಬೇಡ.

ಅಧ್ಯಕ್ಷರು: ಒಂದು ಟೈಂಬಾಂಡ್ ಹೇಳಿ ಬಿಡಿ. ಹಣಕಾಸು ಇಲಾಖೆಯ ಜೊತೆಯಲ್ಲಿ ಮಾತನಾಡಿ ಒಂದು ತಿಂಗಳಲ್ಲಿ ಮಾಡಿಬಿಡಿ.

ಶ್ರೀ ಉಮೇಶ್ ವಿ.ಕತ್ತಿ: ತಮಗೆಲ್ಲಾ ಗೊತ್ತಿರುವಂತೆ ತಾವು ಆರ್ಥಿಕ ಕುಸಿತವನ್ನು ನೋಡುತ್ತಿದ್ದೀರಿ. ಆದರೂ ಕೂಡ ರೈತರಿಗೆ ವಿಶೇಷವಾಗಿ ಕೊಡಬೇಕಾಗಿರುವ ಹಣವನ್ನು ಬರುವ ಎರಡು ತಿಂಗಳೊಳಗಾಗಿ ಮುಟ್ಟಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಸಬ್ಸಿಡಿ ಕೊಡುತ್ತೇವೆಂದು ಹೇಳಿ, ಈ ಸಲ ಸಬ್ಸಿಡಿನ್ನೂ ಕೊಡಲಿಲ್ಲ, ಏನೂ ಕೊಡಲಿಲ್ಲ. ದಾಳಿಂಬೆ ಇರಬಹುದು, ಅಡಿಕೆ, ಕೊಬ್ಬರಿ ಇರಬಹುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಒಂದು ನಿಮಿಷ, ಅದಕ್ಕೆ ಪೂರಕವಾದ ಇವರು ಏನು ಹೇಳಿದ್ದಾರೆಂದರೆ, ರೀಸರ್ಚ್ ಬಗ್ಗೆ ಹೇಳಿದ್ದಾರೆ. 100 ಲಕ್ಷ

ರೂ.ಗಳನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದರ ರಿಪೋರ್ಟ್ ಏನು ಎನ್ನುವುದನ್ನು ಹೇಳುತ್ತಿಲ್ಲ. ಅವರು ಆ ಬೆಳೆಯನ್ನು ಹೇಗೆ ಉಳಿಸುತ್ತಾರೆನ್ನುವ ಬಗ್ಗೆ ಚಿಂತನೆ ಇಲ್ಲ. 100 ಲಕ್ಷ ರೂ.ಗಳಲ್ಲಿ ಏನು ನೀವು ಉಳಿಸುತ್ತೀರಿ? ಅದಕ್ಕೆ ತಾವು ಉತ್ತರವನ್ನು ಹೇಳಬೇಕು. ರೀಸರ್ಚ್ ಮಾಡಿ ಬೆಳೆ ಉಳಿಸುವುದಕ್ಕೆ ನೀವು ಏನು ಮಾಡಿದ್ದೀರಿ? ಅದನ್ನು ಇವರು ಹೇಳುತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ದುಂಡಾಣು ರೋಗವನ್ನು ತಡೆ ಹಿಡಿಯಲಿಕ್ಕೆ 100 ಲಕ್ಷ ರೂ.ಗಳನ್ನು ಖರ್ಚು ಮಾಡಿ ಇದರ ಸಂಶೋಧನೆ ಮಾಡಲಾಗಿದೆ. ಆ ಸಂಶೋಧನೆಯಿಂದ ಬಂದಂಥ ವರದಿಯಿಂದ ಆ ಬೆಳೆ ಇಡುವುದಕ್ಕೆ ಇವತ್ತು ಸಾಧ್ಯವಿದೆ. ತಮಗೂ ಮಾಹಿತಿಯನ್ನು ಒದಗಿಸುತ್ತೇವೆ. ಏಕೆಂದರೆ, ಈಗಾಗಲೇ ನಾವು ರೈತರಿಗೆ ಈ ರೋಗವನ್ನು ಹೇಗೆ ತಡೆಹಿಡಿಯಬೇಕು ಎನ್ನುವುದರ ಬಗ್ಗೆ ಪಾಂಪ್ಲೆಟ್ ಮೂಲಕ ಹಂಚುತ್ತಿದ್ದೇವೆ. ಇದನ್ನು ಮಾನ್ಯ ಸದಸ್ಯರಿಗೂ ಒದಗಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಗೋಪಾಲ ಭಂಡಾರಿಯವರು ಪ್ರಶ್ನೆಯನ್ನು ಕೇಳಿ. ಮಾನ್ಯ ಕೃಷ್ಣಮೂರ್ತಿಯವರೆ, ನೀವು ಕೇಳಬೇಕೆಂದಿರುವುದು ಈ ಪ್ರಶ್ನೆಗೆ ಸಂಬಂಧವಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ನೀವು ಬೇರೆ ಪ್ರಶ್ನೆಯನ್ನು ಕೇಳಿ, ನಾವು ಸವಿಸ್ತಾರವಾಗಿ ಉತ್ತರವನ್ನು ಒದಗಿಸುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ವಿಷಯ ಇದಕ್ಕೆ ಸಂಬಂಧವಿಲ್ಲ.

ಪಡಿತರ ಚೀಟಿಯಲ್ಲಿರುವ ದೋಷಗಳ ಬಗ್ಗೆ

22(332) ಶ್ರೀ ಗೋಪಾಲ ಭಂಡಾರಿ ಹೆಚ್(ಕಾರ್ಕಳ)

ಶ್ರೀ ಹೆಚ್.ಹಾಲಪ್ಪ (ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಪಡಿತರ ಚೀಟಿ ವಿತರಣೆಯಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಬಂದಿದೆ.

ಇದನ್ನು ಸರಿಪಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ:17.7.2007ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನರ್ಹರನ್ನು ಕೈಬಿಡುವ ಕ್ರಮ ಹಾಗೂ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಪಡಿತರ ಚೀಟಿ ನೀಡುವ ಕಾರ್ಯವನ್ನು ತಕ್ಷಣ ಪೂರೈಸಿ ಭಾವಚಿತ್ರ ಹಾಗೂ ಜೀವಮಾಪಕಗಳ ಸಂಗ್ರಹಣೆ ಕಾರ್ಯಕ್ರಮವನ್ನು ಪ್ರಾರಂಭಿಸಿ ಖಾಯಂ ಪಡಿತರ